ಸಾಹಿತ್ಯದ ಅಭಿರುಚಿಯ ವಾತಾವರಣ ಇತ್ತು. ಆಗ ನಾನು ನಾಲ್ಕನೇ ತರಗತಿಯಲ್ಲಿದ್ದೆ. ನನ್ನಪ್ಪ ಖಲೀಲ್ ಗಿಬ್ರಾನನ ಕವಿತೆಗಳನ್ನು ವಾಚಿಸುವಂತೆ ಹೇಳುತ್ತಿದ್ದರು. ನಾನು ವಾಚಿಸಿ, ಬಳಿಕ ಅದನ್ನೇ ಒಂದಿಷ್ಟು ನಕಲು ಮಾಡಿ ಕವಿತೆ ಬರೆಯುತ್ತಿದ್ದೆ, ಬಚ್ಚಿಡುತ್ತಿದ್ದೆ. ಹೈಸ್ಕೂಲಿನಲ್ಲಿರುವಾಗ ಒಂದು ಬಾರಿ ರಾಜ್ಯಮಟ್ಟದ ಸ್ವರಚಿತ ಕವನ ಸ್ಪರ್ಧೆಯಲ್ಲಿ ಭಾಗವಹಿಸಿ ಮೊದಲ ಬಹುಮಾನ ಪಡೆದೆ. ಬಹುಮಾನ ಪಡೆದದ್ದು ಮಲಯಾಳಂನ ಸುಪ್ರಸಿದ್ಧ ಕವಿ ವೈಲುಪುಳ್ಳಿ ಅವರಿಂದ. ದೇವರ ಹಾಗೆ ವೇದಿಕೆ ಮೇಲೆ ನಿಂತಿದ್ದ ಅವರನ್ನು ಕಂಡದ್ದು, ಅವರ ಕೈಯಿಂದ ಬಹುಮಾನ ಪಡೆದಿದ್ದು, ನನ್ನ ಉತ್ಸಾಹವನ್ನು ಇನ್ನಷ್ಟು ಹೆಚ್ಚಿಸಿತ್ತು. ಅಂದಿನಿಂದ 'ನಾನೊಬ್ಬ ಕವಿ' ಎಂದು ನನಗೆ ನಾನೇ ಅಂದುಕೊಳ್ಳಲು ಆರಂಭಿಸಿದೆ.

ತಿರುವನಂತಪುರದ ವಿಶ್ವವಿದ್ಯಾಲಯ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡಿದೆ. ಅದು ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಗಳಿಗೆ ಹೆಸರಾದ ಕಾಲೇಜು. ಅಲ್ಲಿ ಕವಿ ಡಿ. ವಿನಯಚಂದ್ರನ್, ನಾಟಕಕಾರ ಆರ್. ನರೇಂದ್ರಪ್ರಸಾದ್ ಅವರಂತಹ ಪ್ರಮುಖರು ಪಾಠ ಮಾಡುತ್ತಿದ್ದರು. ಆ ದಿನಗಳಲ್ಲಿ ನನಗೆ ನರೇಂದ್ರಪ್ರಸಾದ್ ಅವರ ಜೊತೆ ಉತ್ತಮ ಬಾಂಧವ್ಯ ಬೆಳೆಯಿತು. ಅವರು ನನಗೆ ಬದುಕಲು, ಕವಿತೆ ವಾಚಿಸಲು, ಕುಡಿಯಲು ಜೊತೆಗೆ ಇಂಗ್ಲಿಷನ್ನೂ ಕಲಿಸಿದರು. ಪ್ರಗತಿಪರ ಚಟುವಟಿಕೆಗಳಲ್ಲಿ, ಹೋರಾಟಗಳಲ್ಲಿ ಒಂದಿಷ್ಟು ತೊಡಗಿಸಿಕೊಂಡದ್ದೂ ಆಗಲೇ. ಹಾಗಂತ ಪ್ರಗತಿಪರ ಚಟುವಟಿಕೆಗಳಲ್ಲಿ ನಾನು ಹೆಚ್ಚು ಸಕ್ರಿಯ ಅಲ್ಲ. ಕವಿತೆ ಹಾಗೂ ಪ್ರಗತಿಪರ ಚಟುವಟಿಕೆಗಳಲ್ಲಿ ಒಂದನ್ನು ಆಯ್ಕೆ ಮಾಡುವುದಾದಾರೆ, ನಾನು ಕವಿತೆಯನ್ನೇ ಮೊದಲು ಆಯ್ದುಕೊಳ್ಳುವೆ.

ಜಪಾನಿನ ತೆತ್ಸುಕೊ ಕುರಯೋನಗಿ ಬರೆದ 'ತೊತ್ತೊ ಚಾನ್' ಎನ್ನುವ ಜನಪ್ರಿಯ

